# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು ರವರ ನಿಯಮ 330 ಸೂಚನೆಗೆ ಉತ್ತರ.

**ಪ್ರಶ್ನೆ:** ಮಹಿಳೆಯರ ಸುರಕ್ಷತೆ ಮತ್ತು ರಕ್ಷಣೆಗೆ ಹಲವು ಕಾನೂನುಗಳಿದ್ದರೂ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ ಪ್ರಕರಣಗಳು ಹೆಚ್ಚುತ್ತಲೇ ಇವೆ. ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯಾದ್ಯಂತ 31,503 ಪ್ರಕರಣಗಳು ದಾಖಲಾದರೂ ಶಿಕ್ಷೆ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿಲ್ಲ. ಈ ಎಲ್ಲಾ ಪ್ರಕರಣಗಳಲ್ಲಿ 41,989 ಜನರ ಬಂಧನವಾಗಿದೆ. ಆದರೆ, ವಿವಿಧ ಹಂತದಲ್ಲಿ ಆರೋಪ ಸಾಬೀತಾಗದ ಕಾರಣಕ್ಕೆ 1,668 ಜನ ಖುಲಾಸೆಯಾಗಿದ್ದರೆ, ಕೇವಲ 66 ಜನರಿಗೆ ಮಾತ್ರ ಶಿಕ್ಷೆಯಾಗಿರುವುದನ್ನು ಗಮನಿಸಿದರೆ, ಇದಕ್ಕೆ ಕಾರಣ ಅನೇಕ ಪ್ರಕರಣಗಳು ಮೇಲ್ವರ್ಗದವರ ಪ್ರಭಾವದಿಂದ ಪೊಲೀಸ್ ಠಾಣೆಯಲ್ಲಿ ರಾಜಿ ಸಂಧಾನ ಮಾಡಿ ಮುಚ್ಚಿ ಹಾಕಲಾಗುತ್ತಿದೆ. ಇದರ ಬಗ್ಗೆ ಸರಕಾರ ಕಠಿಣ ಕ್ರಮಕೈಗೊಳ್ಳಬೇಕಾಗಿರುವ ಕುರಿತು.

**ಉತ್ತರ:** ಮಹಿಳೆಯ ಮೇಲಿನ ಅಪರಾಧ ಪ್ರಕರಣಗಳಲ್ಲಿ ನೊಂದವರಿಂದ ಸಂಬಂಧ ಪಟ್ಟ ಪೊಲೀಸ್ ಠಾಣೆಗಳಲ್ಲಿ ದೂರಗಳನ್ನು ಪಡೆದು ಅಪರಾಧ ಕೃತ್ಯಕ್ಕೆ ಅನುಗುಣವಾಗಿ ಕಾನೂನು/ಕಾಯ್ದೆ ಅಡಿಗಳಲ್ಲಿನ ಕಲಂಗಳನ್ವಯ ಎಫ್.ಐ.ಆರ್. ಗಳನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡು, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಆರೋಪಿಗಳನ್ನು ಪತ್ತೆ ಹಚ್ಚಿ, ಬಂಧನ ಪ್ರಕ್ರಿಯೆಗಳನ್ನು ಪೂರೈಸಿ, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗುತ್ತದೆ. ನಂತರದಲ್ಲಿ ಆರೋಪಿಗಳ ವಿರುದ್ಧ ತನಿಖೆಕೈಗೊಂಡು ದೋಷಾರೋಪಣಾ ಪಟ್ಟಿ ಸಿದ್ಧಪಡಿಸಿ, ನಿಯಮಾನುಸಾರ ಸಕ್ಷಮ ನ್ಯಾಯಾಲಯಗಳಿಗೆ ಸಲ್ಲಿಸಲಾಗುತ್ತದೆ.

ಮಹಿಳೆಯ ಮೇಲಿನ ಅಪರಾಧ ಪ್ರಕರಣಗಳಲ್ಲಿ ಪೊಲೀಸ್ ಠಾಣೆಗಳಲ್ಲಿ ಆರೋಪಿಗಳು ಮತ್ತು ನೊಂದವರ ಮಧ್ಯೆ ರಾಜಿ ಸಂಧಾನ ಮಾಡಿ ಪ್ರಕರಣಗಳನ್ನು ಮುಚ್ಚಿ ಹಾಕುವುದು ಕಾನೂನಿಗೆ ವಿರುದ್ಧ ಕ್ರಮವಾಗಿರುತ್ತದೆ. ಈ ರೀತಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದರೆ ಅಂತಹ ಪೊಲೀಸ್ ಅಧಿಕಾರಿ/ಸಿಬ್ಬಂಧಿಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳಡಿಯಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ.

ಮಹಿಳೆಯ ಮೇಲಿನ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು 60 ದಿನಗಳ ನಿಗಧಿತ ಕಾಲವಧಿಯೊಳಗೆ ಪೂರ್ಣಗೊಳಿಸಿ, ಆರೋಪಿಗಳ ಮೇಲೆ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಮಹಿಳೆಯ ಮೇಲೆ ಕಳೆದ 2023, 2024 ಮತ್ತು 2025ನೇ ಸಾಲಿನ ನವೆಂಬರ್ -15ರ ವರೆಗೆ ವರದಿಯಾಗಿರುವ, ಖುಲಾಸೆಗೊಂಡಿರುವ ಮತ್ತು ಶಿಕ್ಷೆಯಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:-

| ಅಪರಾಧ ಶೀರ್ಷಿಕೆ | 2023 | | | 2024 | | | 2025 (ನವೆಂಬರ್-15) | | |
|---|---|---|---|---|---|---|---|---|---|
| | ವರದಿ | ಖುಲಾಸೆ | ಶಿಕ್ಷೆ | ವರದಿ | ಖುಲಾಸೆ | ಶಿಕ್ಷೆ | ವರದಿ | ಖುಲಾಸೆ | ಶಿಕ್ಷೆ |
| ಅತ್ಯಾಚಾರ | 600 | 72 | 0 | 716 | 37 | 0 | 586 | 0 | 0 |
| ಲೈಂಗಿಕ ಕಿರುಕುಳ | 6487 | 879 | 38 | 6334 | 266 | 18 | 5124 | 11 | 2 |
| ಗಂಡನಿಂದ ಕಿರುಕುಳ | 2955 | 429 | 11 | 2900 | 214 | 6 | 2527 | 19 | 0 |
| ವರದಕ್ಷಿಣೆ ಸಾವು | 158 | 19 | 0 | 112 | 4 | 0 | 102 | 0 | 0 |
| ವರದಕ್ಷಿಣೆ ನಿಷೇಧ ಕಾಯ್ದೆ | 2341 | 311 | 3 | 1994 | 88 | 2 | 1746 | 4 | 0 |

ಮೇಲಿನ ಅಂಕಿ-ಅಂಶಗಳಿಂದ ಒಟ್ಟಾರೆಯಾಗಿ ರಾಜ್ಯದಲ್ಲಿ ಮಹಿಳೆಯ ಮೇಲಿನ ಅಪರಾಧ ಪ್ರಕರಣಗಳು ಇಳಿಮುಖವಾಗಿರುವುದು ಕಂಡುಬರುತ್ತದೆ.

ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ, ನೊಂದವರು ದೂರು ದಾಖಲಿಸುವಲ್ಲಿ ತಡಮಾಡುವುದರಿಂದ, ನ್ಯಾಯಾಲಯಗಳಲ್ಲಿ ಸಾಕ್ಷಿಗಳು ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದರಿಂದ, ಸಂದರ್ಭಾನುಸಾರ ನೊಂದವರು ನ್ಯಾಯಾಲಯದಲ್ಲಿ ರಾಜಿ ಒಪ್ಪಂದ ಮಾಡಿಕೊಳ್ಳುವುದರಿಂದ ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ದೀರ್ಘ ಕಾಲದವರೆಗೆ ವಿಚಾರಣೆ ಮುಂತಾದ ಕಾರಣಗಳಿಂದ ಶಿಕ್ಷೆ ಪ್ರಮಾಣವು ಕಡಿಮೆಯಾಗಿರುತ್ತದೆ.

**ಮಹಿಳೆಯರು ಸುರಕ್ಷತೆ ಮತ್ತು ರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-**

1. ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ Free and Fair registration of cases ಎಂಬುದು ನಮ್ಮ ರಾಜ್ಯದ ಪೊಲೀಸ್ ಇಲಾಖೆಯ ಘೋಷ ವಾಕ್ಯವಾಗಿದೆ.
2. ಮಹಿಳಾ ಸಹಾಯವಾಣಿ (1091), ಮಕ್ಕಳ ಸಹಾಯವಾಣಿ 1098 ಮತ್ತು 22943225 ಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ.
3. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಸಂಬಂಧವಾಗಿ ಬೆಂಗಳೂರು ನಗರದಾದ್ಯಂತ 241 ಹೊಯ್ಸಳಗಳು ಕಾರ್ಯ ನಿರ್ವಹಿಸುತ್ತಿದ್ದು ತ್ವರಿತ ನೆರವು ನೀಡಿ ಕರೆಗಳಿಗೆ ಸ್ಪಂದಿಸಲಾಗುತ್ತಿದೆ.
4. ಬೆಂಗಳೂರು ನಗರದಲ್ಲಿ Safe City Project ಯೋಜನೆ ಅಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಸಂಬಂಧವಾಗಿ 8,876 ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗಿದೆ.
5. ಜನ ಸಂದಣಿ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ 50 ಸೇಫ್ಟೀ ಐಲ್ಯಾಂಡ್ (Safety Island)ಗಳನ್ನು ಗುರುತಿಸಿ ಮಹಿಳೆಯರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ಕಾರ್ಯೋನ್ಮುಖವಾಗಿ ಸಮರ್ಥವಾಗಿ ನಿರ್ವಹಿಸುತ್ತಿದೆ.
6. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳಲ್ಲಿ 1050 Women Help Desk ಗಳನ್ನು ಸೃಜಿಸಿ 24/7 ಮಹಿಳಾ ಸುರಕ್ಷತಾ ದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.
7. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಠಾಣೆಗಳಲ್ಲಿ 42 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು (Anti-Human Trafficking Units) ಸ್ಥಾಪಿಸಿ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ನಿರ್ವಹಿಸಲಾಗುತ್ತಿದೆ.
8. ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಸಹಯೋಗದೊಂದಿಗೆ CCPWC (Cyber Crime Prevention Against Women and Children) ಪೋರ್ಟಲ್ ಅಡಿಯಲ್ಲಿ ಆನ್-ಲೈನ್‌ನಲ್ಲಿ ದಾಖಲಾಗುವ ದೂರುಗಳನ್ನು ಸೆನ್ ಪೊಲೀಸ್ ಠಾಣೆಗಳಲ್ಲಿ ದಾಖಲಿಸಿ ಕ್ರಮ ವಹಿಸಲಾಗುತ್ತದೆ.
9. ಕಾಣೆಯಾದ ಮಕ್ಕಳ ಮಾಹಿತಿ ಮತ್ತು ಪತ್ತೆಯಾದ ಮಕ್ಕಳ ಮಾಹಿತಿಯನ್ನು Track child Portal/Mission Vathsalya Portal ಗಳಿಗೆ ಸಲ್ಲಿಸಿಕೊಂಡು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

...3

10. ರಾಜ್ಯದ 31 ಜಿಲ್ಲೆಗಳು ಸೇರಿದಂತೆ 05 ಪೊಲೀಸ್ ಕಮೀಷನರೇಟ್‌ಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ದಿನಾಂಕ: 28/11/2025 ರಿಂದ ಅಧಿಕೃತವಾಗಿ "ಅಕ್ಕ ಪಡೆ" ತಂಡವನ್ನು ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ರಚನೆ ಮಾಡಲಾಗಿದೆ.
11. ಮಹಿಳೆಯರ ಸುರಕ್ಷತೆ ಮತ್ತು ರಕ್ಷಣೆ ಸಂಬಂಧ ಉಗ್ರಪ್ಪ ಸಮಿತಿಯು ನೀಡಿರುವ ಒಟ್ಟು 59 ಶಿಫಾರಸ್ಸುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚಿಸಲಾಗಿದೆ.
12. ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಮೂಲಕ ಮಹಿಳೆಯರ ಸುರಕ್ಷತೆಯ ಬಗ್ಗೆ ಕ್ರಮ ವಹಿಸಲಾಗಿದೆ.

**ಮಹಿಳೆಯ ಸುರಕ್ಷತೆಗಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ksp.karnataka.gov.in ವೆಬ್ ಸೈಟ್ ನಲ್ಲಿ ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತಿದೆ:-**

- ಮಹಿಳೆಯರ ಸುರಕ್ಷತೆಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಆಪ್.
- SOS ಒತ್ತಿದ ತಕ್ಷಣ Control Room ಗೆ ಸೂಚನೆ + ಸ್ಥಳ ವಿವರ + Audio/Video evidence ಕಳಿಸಲಾಗುತ್ತದೆ.
- Live Location Track ಮಾಡಿ ERSS Command Centre ಮೂಲಕ ತ್ವರಿತ ಪ್ರತಿಕ್ರಿಯೆ
- Women safety awareness & self-defense programs.

**ಸಂಖ್ಯೆ:ಹೆಚ್‌ಡಿ 56 ಎಸ್‌ಡಿಎನ್ 2025**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು